ಗಿಳಿಗಳ ಪಂಜರಗಳನ್ನು ಮೆಲ್ಲಗೆ ಮುಟ್ಟಿ ತೂಗಾಡಿಸಿ, "ನಿಮಗೀಗ ಏನು ಬೇಕು?" ಎಂದು ಅವುಗಳನ್ನು ಕೇಳಿದಳು.

"ನಾಳೆಯಿಂದ ಮುಂದಿನ ಶುಕ್ಲ ಪಕ್ಷ ಆರಂಭವಾಗುತ್ತದೆ. ಸರಿಯಾಗಿ ಒಂದು ತಿಂಗಳ ಗಡುವು ಮುಗಿಯುತ್ತದೆ. ಆ ಸನ್ಯಾಸಿ ನೀನು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರ ಕಂಡುಕೊಂಡು ಮತ್ತೆ ಹಿಂತಿರುಗಿ ಬಂದು ನಿನ್ನನ್ನು ವಾದದಲ್ಲಿ ಗೆಲ್ಲುತ್ತಾರೆ ಎಂದು ನಂಬುತ್ತೀಯ, ಸರಸವಾಣಿ?" ಎಂದು ಮೊದಲ ಗಿಳಿ ಅವಳನ್ನು ಕೇಳಿತು.

"ನೀವು ಬಹಳ ಚಾಲಾಕಿ ಗಿಳಿಗಳು. ಮನೆಯಲ್ಲಿ ನಡೆಯುವ ಪ್ರತಿಯೊಂದು ವಿಷಯವನ್ನೂ ಗಮನಿಸಿರುತ್ತೀರಿ. ನಿಮಗೆ ನಾನು ಕೊಟ್ಟ ಸಲಿಗೆ ಹೆಚ್ಚಾಯಿತೆಂದು ಕಾಣುತ್ತದೆ..." ಎಂದು ಸರಸವಾಣಿ ಮತ್ತೆ ಹುಸಿಗೋಪ ತೋರಿದಳು.

"ನಮ್ಮನ್ನು ನೀನು ಎಷ್ಟೊಂದು ಪ್ರೀತಿಯಿಂದ ನೋಡಿಕೊಳ್ಳುತ್ತೀಯೆ? ಎಷ್ಟೊಂದು ಹೇಳಿಕೊಟ್ಟಿರುವೆ? ನಿನಗೆ ಪ್ರತಿ ಉಪಕಾರವಾಗಿ ನಾವು ಅಕ್ಕರೆ ತೋರಿಸಬೇಕಲ್ಲವೇ?" ಎಂದು ಅವಳನ್ನು ಸಮಾಧಾನ ಮಾಡುವ ದನಿಯಲ್ಲಿ ಹೇಳಿತು ನಾಲ್ಕನೆಯ ಗಿಳಿ.

ಸರಸವಾಣಿ ಈಗ ಮೌನ ತಾಳಿದಳು. ಗಿಳಿಯ ಮಾತುಗಳು ಅವಳನ್ನು ಗಾಢವಾದ ಯೋಚನೆಯಲ್ಲಿ ಮುಳುಗಿಸಿದವು. ಅಲ್ಲಿಂದ ಸರಿದು ಮೆಟ್ಟಲು ಹತ್ತಿ ಮಹಡಿಗೆ ಹೋದಳು. ಚಂಚಲವಾದ ವಿವಿಧ ಭಾವನೆಗಳೊಂದಿಗೆ ಕಿಟಕಿಯ ಮೂಲಕ ಹೊರ ಜಗತ್ತನ್ನು ನೋಡುತ್ತ ನಿಂತಳು.

ದೂರದಲ್ಲಿ ನರ್ಮದೆ ಶಾಂತವಾಗಿ ಹರಿಯುತ್ತಿದ್ದಳು. ಅದರಲ್ಲಿ ದೋಣಿಗಳು ತೇಲುತ್ತಿದ್ದವು. ನಾವಿಕರು ಯಾವ ಚಿಂತೆಯೂ ಇಲ್ಲದೆ ಅವರಿಗೆ ಇಷ್ಟವಾದ ಹಾಡುಗಳನ್ನು ಎತ್ತರದ ದನಿಯಲ್ಲಿ ಹಾಡುತ್ತ ಜನಗಳನ್ನು ಹತ್ತಿಸಿಕೊಂಡು ನದಿಯನ್ನು ಹಾದುಹೋಗುತ್ತಿರುವುದು ನೆರಳಾಗಿ ಕಂಡಿತು.

ಸರಸವಾಣಿ ಮತ್ತೊಂದು ಕಡೆ ತಿರುಗಿ ನೋಡಿದಳು. ಅಲ್ಲಿ ತಟಾಕದಲ್ಲಿ ನೀಲೋತ್ಪಲಗಳು ಮೆಲ್ಲಗೆ ಬಿರಿದು ಮೃದುವಾಗಿ ಅರಳುತ್ತಿದ್ದವು. ಅವು ರಾತ್ರಿಯ ಬರುವನ್ನು ಸಂತೋಷದಿಂದ ಸ್ವಾಗತಿಸಲು ತಮ್ಮನ್ನು ಸಿದ್ಧಪಡಿಸಿಕೊಂಡವು. ಚಾತಕ ಪಕ್ಷಿಗಳು ಮನುಷ್ಯರಿಗಿರುವ ಯಾವ ಸಂಕೋಚಗಳೂ ಇಲ್ಲದೆ, ಜತೆ ಜತೆಯಾಗಿ, ಒಂದನ್ನೊಂದು ಅಗಲದೆ ಒಂದನ್ನೊಂದು ಉಜ್ಜಿಕೊಳ್ಳುತ್ತಾ ತಟಾಕದಲ್ಲಿ ಬೆಳಕು ಕಡಿಮೆ ಇರುವ ಸ್ಥಳಗಳ ಕಡೆ ಈಜಿ ಹೋದವು.

ಸರಸವಾಣಿ ನಿಟ್ಟುಸಿರುಬಿಟ್ಟಳು. ಆ ನಿಟ್ಟುಸಿರಿನ ಏರಿಳಿತಕ್ಕೆ ಸ್ಪಂದಿಸುವ ತನ್ನ ಸ್ತನಗಳನ್ನು ಒಂದು ಕ್ಷಣ ಅವಳೇ ಗಮನಿಸಿ ನಾಚಿಕೆಯಿಂದ ಚಟ್ಟೆಂದು ಕಣ್ಣುಗಳನ್ನು ಅಲ್ಲಿಂದ ಮೇಲಕ್ಕೆತ್ತರಿಸಿದಳು. ಅವಳು ತನ್ನೊಳಗೆ ಪ್ರಶ್ನಿಸಿಕೊಂಡಳು – ತಾಪಗಳೂ, ಮೋಹಗಳೂ, ಆಸೆಗಳೇ ಅಲ್ಲವೇ ಈ ಬದುಕನ್ನು ಅರ್ಥವುಳ್ಳದ್ದಾಗಿ ಮಾಡಿ ಸೃಷ್ಟಿಯನ್ನು ಜೀವಂತವಾಗಿ ಉಳಿಸಿಕೊಂಡಿದ್ದು? ಈ ಚಾತಕ ಪಕ್ಷಿಗಳ ಭಾಗ್ಯ ಸಹ ನಮಗಿಲ್ಲವಲ್ಲ. ವಾದ ಮಾಡಿ ಯಾವ ಸಿದ್ಧಾಂತವನ್ನು ನಿರೂಪಿಸಬೇಕೆಂಬ ಚಿಂತೆ ಇವಕ್ಕೆ? ಚಾತಕ ಪಕ್ಷಿಗಳು ಎಂದಾದರೂ ಸನ್ಯಾಸ ಸ್ವೀಕರಿಸುವ ಬಗ್ಗೆ ಯೋಚಿಸಿವೆಯೇ? ಖುಷಿಯಾಗಿರುತ್ತವೆ, ಸದಾ ಜತೆಗೂಡಿ ಸಾಂಗತ್ಯ ಮಾಡಿ ಸುಖಿಸಿರುವುದಷ್ಟೇ ಅಲ್ಲವೇ ಅವುಗಳ ಸ್ವಭಾವ. ಸ್ವಭಾವವನ್ನು ಕಳೆದುಕೊಳ್ಳುವುದು ಮನುಷ್ಯರಿಂದ ಮಾತ್ರವೇ ಸಾಧ್ಯ, ಅಲ್ಲವೇ!

ಇನ್ನು ಸ್ವಲ್ಪ ಹೊತ್ತಿನಲ್ಲಿ ಇರುಳು ಕವಿಯುವುದು. ಮನೆಯ ದಾಸಿ, ದೀಪಗಳಿಗೆ ಎಣ್ಣೆ ಸುರಿದು, ಬತ್ತಿಗಳನ್ನು ಸರಿಮಾಡಿ, ಒಂದೊಂದಾಗಿ ಅವುಗಳನ್ನು ಹಚ್ಚಿಸಿಕೊಂಡು ಬರುವುದು ಕಂಡಿತು.